# ಯಕ್ಷಗಾನ ಪ್ರಸಂಗ-೫

ರಚನೆ : ಡಾ|| ದಿನಕರ ಎಸ್. ಪಚ್ಚನಾಡಿ

## ಪಚ್ಚನಾಡಿ ಪ್ರಸಂಗ ಸಂಪುಟ - ೧

ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಇವರ ಸಹಾಯಧನ ಪಡೆದ ಕೃತಿ

Scanned with CamScanner

30/6/17.

# ಯಕ್ಷಗಾನ ಪ್ರಸಂಗ-೫೭

ರಚನೆ : ಡಾ॥ ದಿನಕರ ಎಸ್. ಪಚ್ಚನಾಡಿ

## ಪಚ್ಚನಾಡಿ ಪ್ರಸಂಗ ಸಂಪುಟ - ೧

ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಇವರ ಸಹಾಯಧನ ಪಡೆದ ಕೃತಿ



Scanned with CamScanner

**'Yakshagana Prasanga- 5'**
(Pachanadi Prasanga Samputa-1) written & printend by Dr. Dinakara S. Pachanadi, 3-96 Devi Kripa House, Pachanadi, Bondel Post, Mangalore - 575008

Edition : 2010

Copy Right : Dr. Dinakar S. Pachanadi

Rs. : 50.00

---------------

# ಅರ್ಪಣೆ

ಯಕ್ಷಗಾನ ಕಲಾರಾಧಕಿ

**ದಿ| ಲೋಲಮ್ಮ ಪಚ್ಚನಾಡಿ**

ಯಕ್ಷಗಾನದ ಕ್ಷೇತ್ರದಲ್ಲಿ ಬೆಳೆಯುವಂತೆ
ನನ್ನನ್ನು ಬಾಲ್ಯದಲ್ಲೇ ಕುಣಿಸಿ ನಲಿಸಿ,
ಕಾವೂರು ಕೇಶವರವರಲ್ಲಿ ನಾಟ್ಯಾಭ್ಯಾಸಕ್ಕೆ
ಸೇರಿಸಿ, ಉತ್ತೇಜಿಸಿದ
ನನ್ನ ಅಜ್ಜಿಯ ಆತ್ಮಚೇತನಕ್ಕೆ
ಪ್ರಥಮ ಕೃತಿಯನ್ನು ಅರ್ಪಿಸುತ್ತೇನೆ



Scanned with CamScanner

# ಸೇಸೆ

ಜಾಗತೀಕರಣದ ಆಕ್ರಮಣ, ಬಲಿಷ್ಠ ದೃಶ್ಯಮಾಧ್ಯಮಗಳ ಆಕರ್ಷಣ ಇತ್ಯಾದಿ ಪ್ರತಿಕೂಲ ವಿದ್ಯಮಾನಗಳ ನಡುವೆಯೂ ಕರ್ನಾಟಕದ ರಾಜಕಲೆಯೆನಿಸಿದ ಯಕ್ಷಗಾನವು ಕೆಲವೊಮ್ಮೆ ಕಳೆಗುಂದಿದಂತೆ ಕಂಡರೂ ಮತ್ತೆ ಮತ್ತೆ ಚೇತರಿಸುತ್ತ ತನ್ನ ನಿತ್ಯನೂತನತೆಯನ್ನು ಜೀವಂತಿಕೆಯುನ್ನು ನಾನಾ ವಿಧವಾಗಿ ಪ್ರಕಟಿಸುತ್ತಿರುವುದು ವಿಚಿತ್ರವಾದರೂ ಸತ್ಯವಿಚಾರವಾಗಿದೆ. ಹಾಗೆಯೇ ಸಂತೋಷ ಪ್ರದವಾದ ಸಂಗತಿಯೂ ಹೌದು.

ಯಕ್ಷಗಾನಕ್ಕೆ ಸಂಬಂಧಿಸಿದ ಬಹುಮುಖ ಕಾಯಕಗಳಲ್ಲಿ ಯಕ್ಷಗಾನ ರಂಗಪ್ರದರ್ಶನಕ್ಕೆ ಮೂಲಮಾತೃಕೆಯಾದ ಯಕ್ಷಗಾನ ಪ್ರಸಂಗ ರಚನೆಯೂ ಒಂದಷ್ಟೇ? ವಿಶಿಷ್ಟ ಲಕ್ಷಣಯುಕ್ತವಾದ ಇಂಥ ಕಾವ್ಯ ಸೃಷ್ಟಿಯೂ ಇಂದಿನ ದಿನಗಳಲ್ಲಿ ನಡೆಯುತ್ತಿರುವುದು ಅಭಿಮಾನ ಪಡತಕ್ಕ ವಿಚಾರ.

ಬಹುಮುಖ ಪ್ರತಿಭಾವಂತ, ತರುಣ ವಿದ್ವಾಂಸ ಡಾ॥ ದಿನಕರ ಪಚ್ಚನಾಡಿ ಇವರು ಮಂಗಳೂರಿನ ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿಯುತ್ತಾ ಹವ್ಯಾಸಿ ಯಕ್ಷಗಾನ ಕಲಾವಿದರಾಗಿಯೂ, ಆಸಕ್ತ ವಿದ್ಯಾರ್ಥಿಗಳಿಗೆ ಯಕ್ಷಗಾನ ಶಿಕ್ಷಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಯಕ್ಷಗಾನ ಅಧ್ಯಯನ ವಿಚಾರದಲ್ಲೂ ವಿಶೇಷ ಸಾಧನೆಗೈದಿರುವ ಇವರು ಯಕ್ಷಗಾನ ಸಾಹಿತ್ಯ ಮೀಮಾಂಸೆಯ ಕುರಿತಾದ ಸಂಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ "ಡಿ.ಲಿಟ್" ಪದವಿಯನ್ನು ಪಡೆದಿದ್ದಾರೆ.

ಯಕ್ಷಗಾನ ಪ್ರಸಂಗ ಸಾಹಿತ್ಯ ರಚನೆಯ ಕ್ಷೇತ್ರಕ್ಕೂ ಡಾ. ಪಚ್ಚನಾಡಿಯವರ ವಿಶಿಷ್ಟ ಕೊಡುಗೆ ಸಂದಿರುವುದು ಉಲ್ಲೇಖನೀಯ.

ಹಿರಿಯ ಯಕ್ಷಗಾನ ವಿದ್ವಾಂಸರಾದ ಡಾ॥ ಶಿಮಂತೂರು ನಾರಾಯಣ ಶೆಟ್ಟರಿಂದ ಯಕ್ಷಗಾನ ಛಂದೋವಿಚಾರದಲ್ಲಿ ಹೆಚ್ಚಿನ ಮಾರ್ಗದರ್ಶನವನ್ನು ಪಡೆದ ಇವರು ಕನ್ನಡ ಪೌರಾಣಿಕ ಪ್ರಸಂಗಗಳನ್ನಲ್ಲದೆ ತುಳುಭಾಷೆಯಲ್ಲೂ ಪ್ರಸಂಗ ರಚನೆ ಮಾಡಿರುತ್ತಾರೆ.



Scanned with CamScanner

ಇಲ್ಲಿ ಸಂಕಲನಗೊಂಡಿರುವ 'ರಾಜಾ ದಂಡಕ', 'ಅಗಸ್ತ್ಯ ಪ್ರತಾಪ', 'ವಿರಾಧ ಮೋಕ್ಷ', 'ವೀರ ತರಣಿಸೇನ' ಹಾಗೂ 'ಪಾಂಚಜನ್ಯೋತ್ಪತ್ತಿ' ಎಂಬೀ ಐದು ಪ್ರಸಂಗಗಳೂ ಪುರಾಣ ಪ್ರಪಂಚಕ್ಕೆ ಸಂಬಂಧ ಪಟ್ಟವುಗಳು ಯಕ್ಷಗಾನದಂಥ ಸಮೃದ್ಧವೂ, ಸಮಗ್ರವೂ ಎನಿಸಿದ ರಮ್ಯಾದ್ಭುತ ಜಾಯಮಾನದ ರಂಗಭೂಮಿಗೆ ಸಲ್ಲುವ ಕಥಾನಕಗಳಿಗೆ ಪುರಾಣಗಳು ಅಕ್ಷಯ ಆಕರಗಳಾಗಿವೆ. ಯುಕ್ತ ಕಥಾಸಾಮಗ್ರಿಗಳನ್ನು ಆಯ್ಕೆ ಮಾಡಿ ಯಕ್ಷಗಾನ ರಂಗಕ್ಕೆ ಒಪ್ಪುವಂತೆ ಕೃತಿರಚನೆ ಮಾಡುವುದು ಯಕ್ಷಗಾನ ಕವಿಯ ಪ್ರತಿಭಾ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಈ ದಿಶೆಯಲ್ಲಿ ಡಾ॥ ಪಚ್ಚನಾಡಿಯವರ ಸಾಧನೆ ಶ್ಲಾಘ್ಯವೂ ರೋಚಕವೂ ಆಗಿದೆ. ಈ ಯಕ್ಷಗಾನ ಪ್ರಸಂಗಗಳು ಯಕ್ಷಗಾನ ರಂಗ ಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿವೆ ಎನ್ನಲು ಅಡ್ಡಿಯಿಲ್ಲ. ಈ ಕೃತಿಗಳು ಈಗಾಗಲೇ ಯಕ್ಷಗಾನ ರಂಗಸ್ಥಳದಲ್ಲಿ ಯಶಸ್ವಿಯಾಗಿ ಪ್ರಯೋಗಗೊಂಡಿವೆ.

ಯಕ್ಷಗಾನ ಪ್ರಸಂಗರಚನೆ ಸರಳ ಸುಲಭ ಕಾಯಕವಲ್ಲ. ಅಂಥ ಶ್ರಮದಾಯಕವಾದ ಸಾಹಿತ್ಯರಚನೆಯಲ್ಲಿ ಡಾ॥ ಪಚ್ಚನಾಡಿಯವರು ಸಾಕಷ್ಟು ಪ್ರೌಢಿಮೆಯನ್ನು ಗಳಿಸಿದ್ದಾರೆ. ಸಾಹಿತ್ಯದೃಷ್ಟಿಯಿಂದ ಇವರ ಕೃತಿಗಳಲ್ಲಿನ ಮೌಲಿಕತೆ ಗಮನೀಯವಾಗಿದೆ. ಈ ಸಾಧನೆಗಾಗಿ ಶ್ರೀಯುತರನ್ನು ಮನಸಾರೆ ಅಭಿನಂದಿಸುತ್ತೇನೆ. ಅಂತೆಯೆ, ಡಾ॥ ದಿನಕರ ಪಚ್ಚನಾಡಿಯವರಿಂದ ಯಕ್ಷಗಾನ ಕ್ಷೇತ್ರದ ಬಹುಮುಖ ಸೇವೆಯು ಇನ್ನಷ್ಟು ಪ್ರಮಾಣದಲ್ಲಿ ಜರಗಲಿ ಎಂದು ಹಾರೈಸುತ್ತೇನೆ.

**ಡಾ॥ ಅಮೃತ ಸೋಮೇಶ್ವರ**
ನಾಡಿನ ಹಿರಿಯ ಕವಿ
ಮತ್ತು ಯಕ್ಷಗಾನ ಪ್ರಸಂಗಕರ್ತರು

**"ಒಲುಮೆ"**
**ಕೋಟೆಕಾರು, ಮಂಗಳೂರು**



Scanned with CamScanner

# ಅಂತರಂಗ

ಯಕ್ಷಗಾನದ ಪರಿಸರದಲ್ಲಿ ಹುಟ್ಟಿರುವ ನಾನು ಬುದ್ಧಿ ಬೆಳೆಯುವ ಮುನ್ನವೇ ಮನೆಯಂಗಳದಲ್ಲಿ ಕುಣಿದವನು. ಪ್ರಸ್ತುತ ರಂಗದ ಪ್ರವೃತ್ತ ಕಲಾವಿದನಾಗಿ ಕಲಾ ಸೇವೆಯ ನಿಮಿತ್ತ ಬೆಳೆಯುತ್ತಾ ಇರುವೆನು. ವೇಷ ಮಾಡುವ ಹಂಬಲದಿಂದ ರಂಗಕ್ಕೆ ಬಂದ ನಾನು ಅವಶ್ಯಕತೆಗನುಗುಣವಾಗಿ ಬೆಳೆಯುವ ಉತ್ಸಾಹ, ಶ್ರಮಿಸುವ ಆಸಕ್ತಿ, ಪರೋಪಕಾರ ಗುಣ ಮತ್ತು ಪ್ರತಿಕೂಲವನ್ನು ಉತ್ತರಿಸುವ ಮನೋಧರ್ಮದವನಾಗಿದ್ದ ಕಾರಣ ಯಕ್ಷಗಾನದ ಕ್ಷೇತ್ರದಲ್ಲಿ ಸಾಧಕನಾಗಿ ಗುರುತಿಸಲ್ಪಟ್ಟಿದ್ದೇನೆ.

ಪರರ ಹಿತಕ್ಕಾಗಿ ಫಲಾಪೇಕ್ಷೆ ಇಲ್ಲದೆ ಈ ತನಕ ಶ್ರಮಪಟ್ಟು ದುಡಿದದ್ದೇ ಹೆಚ್ಚು. ಆದರೆ ಆ ಸಂದರ್ಭಗಳಲ್ಲಿ ದೈವದತ್ತವಾಗಿ ಬಂದ ಪ್ರತಿಭೆ ಹಾಗೂ ಸಾಂದರ್ಭಿಕ ಚಿಂತನೆಗಳು ಸ್ವಂತ ವರ್ಚಸ್ಸಿನ ಬೆಳವಣಿಗೆಗೆ ಕಾರಣವಾಗಿರುವುದರಿಂದ ಒಂದು ರೀತಿಯ ಸಂತೃಪ್ತಿ ಇದೆ. ಪ್ರಸಂಗರಚನೆ, ಪ್ರಸಾಧನ, ಪಾತ್ರನಿರ್ವಹಣೆ, ಬರೆಹ, ನಿರ್ದೇಶನ, ದಿಗ್ದರ್ಶನ ಎಲ್ಲಕ್ಕೂ ಇದೇ ಹಿನ್ನಲೆ.

ಯಕ್ಷಗಾನ ಪ್ರಸಂಗ ಕರ್ತನಾಗಿ ಈಗಾಗಲೇ ಹಲವಾರು ಪ್ರಸಂಗಗಳನ್ನು ರಚಿಸಿರುವೆನು. ಇವುಗಳಲ್ಲಿ ಹೆಚ್ಚಿನವು ಕಾಲಮಿತಿಯ ಪ್ರದರ್ಶನಕ್ಕಾಗಿ ಬರೆದ ಪ್ರಸಂಗಗಳೇ ಆಗಿವೆ. ಯಕ್ಷಗಾನ ಪ್ರಸಂಗ– ೫ (ಪಚ್ಚನಾಡಿ ಪ್ರಸಂಗ ಸಂಪುಟ – ೧ ) ಎಂಬ ಶೀರ್ಷಿಕೆಯ ಈ ಹೊತ್ತಗೆಯಲ್ಲಿ 'ರಾಜಾ ದಂಡಕ', ಅಗಸ್ತ್ಯ ಪ್ರತಾಪ, ವಿರಾಧ ಮೋಕ್ಷ, ವೀರ ತರಣಿಸೇನ ಹಾಗೂ ಪಾಂಚಜನ್ಯೋತ್ಪತ್ತಿ ಎಂಬ ೫ ಪುರಾಣ ಪ್ರಸಂಗಗಳನ್ನು ಆಯ್ದು ಮುದ್ರಿಸಿ, ಕಲಾಕ್ಷೇತ್ರಕ್ಕೆ ಅರ್ಪಿಸಿದ್ದೇನೆ.

ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಯೋಜನೆಗಳಲ್ಲಿ ಯುವ ಬರಹಗಾರರ ಚೊಚ್ಚಲ ಕೃತಿಗೆ ನೀಡುವ ಪ್ರೋತ್ಸಾಹ ಧನಕ್ಕೆ ನನ್ನ ಈ ಕೃತಿಯು ಆಯ್ಕೆಯಾದುದರಿಂದ ಮುದ್ರಣ ಮಾಡಲು ಒಳ್ಳೆಯ ಅವಕಾಶವೇ ಒದಗಿಬಂತು. ಪ್ರಾಧಿಕಾರದಿಂದ ಪ್ರಕಟಣೆಗೆ ರೂ. ೧೦,೦೦೦/– ದೊರಕಿದ ಕಾರಣದಿಂದ ಪ್ರಪ್ರಥಮವಾಗಿ ಪ್ರಾಧಿಕಾರದ ಆಡಳಿತಾಧಿಕಾರಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಛಂದೋಬಂಧಗಳ ವಿವೇಚನೆ ಮತ್ತು ಸಾಹಿತ್ಯ ಶುದ್ಧಿಯ ಬಗ್ಗೆ ತಿಳುವಳಿಕೆ ನೀಡಿ ಬೋಧಿಸಿ ನನ್ನನ್ನು ಬೆಳೆಸಿದ ಗುರುವರೇಣ್ಯ, ಛಂದೋಬ್ರಹ್ಮ ಡಾ॥ ಎನ್. ನಾರಾಯಣ ಶೆಟ್ಟಿಯವರಿಗೆ ಹೃದಯ ಪೂರಕವಾಗಿ ಪ್ರಣಾಮವನ್ನು ಸಲ್ಲಿಸುತ್ತೇನೆ. ಪ್ರಸಂಗಕ್ಕೆ ಮುನ್ನುಡಿಯ ಸೇಸೆಯನ್ನಿತ್ತು ಹರಸಿದ ಗುರು ಸಮಾನ



Scanned with CamScanner

ಡಾ॥ ಅಮೃತ ಸೋಮೇಶ್ವರ ಇವರು ನನ್ನ ಪ್ರಸಂಗ ಮತ್ತು ಸಾಹಿತ್ಯ ಮೀಮಾಂಸೆಯ ನೆಲೆಯಿಂದ ಹಲವು ಸಂದರ್ಭಗಳಲ್ಲಿ ಸಲಹೆ ಮತ್ತು ಮಾರ್ಗದರ್ಶನವನ್ನು ಮಾಡಿದ್ದಾರೆ. ಇವರಿಗೆ ಪ್ರಾಂಜಲ ಮನಸ್ಸಿನಿಂದ ವಂದಿಸುತ್ತೇನೆ.

ಇಲ್ಲಿನ ಪ್ರಸಂಗಗಳ ರಚನೆ, ಪ್ರದರ್ಶನ ಮತ್ತು ಪ್ರಕಟಣೆಯ ಸಂದರ್ಭದಲ್ಲಿ ಪೂರ್ಣ ಸಹಕಾರ ಹಾಗೂ ಪ್ರೋತ್ಸಾಹವನ್ನಿತ್ತ ಹವ್ಯಾಸಿ ಬಳಗ ಕದ್ರಿಯ ಸಂಚಾಲಕರಾದ ಶ್ರೀ ಶರತ್‌ಕುಮಾರ್ ಕದ್ರಿಯವರಿಗೆ ಆತ್ಮೀಯವಾದ ನಮನವನ್ನು ಸಲ್ಲಿಸುತ್ತೇನೆ. ನನ್ನ ಪ್ರಸಂಗ ರಚನೆಯ ಆರಂಭದ ಹಂತದಲ್ಲಿ ಮಾರ್ಗದರ್ಶನವನ್ನು ನೀಡಿದ ಶ್ರೀ ದೇವರಾಜ ಹೆಗ್ಡೆ, ಪುತ್ತೂರು ಇವರಿಗೂ ವಂದನೆಯನ್ನು ಸಲ್ಲಿಸುತ್ತೇನೆ. ಈ ಪ್ರಸಂಗಗಳ ಪ್ರದರ್ಶನದ ಸಂದರ್ಭಗಳಲ್ಲಿ ಪಾತ್ರ ನಿರ್ವಹಣೆಯ ಮೂಲಕ ಸ್ಪಂದಿಸಿದ ಕಲಾವಿದರಿಗೆ ನಮನವನ್ನು ಸಲ್ಲಿಸುತೇನೆ. ನನಗೆ ಉತ್ತೇಜನ ನೀಡಿದ ಕುಟುಂಬ ವರ್ಗಕ್ಕೂ ವಂದನೆಗಳು.

ನಾನು ಉಪನ್ಯಾಸಕ ವೃತ್ತಿಯನ್ನು ಮಾಡುತ್ತಿರುವ ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನ ಸಂಚಾಲಕರು ಮತ್ತು ಆಡಳಿತ ಮಂಡಳಿ, ಪ್ರಾಂಶುಪಾಲರು ಉಪನ್ಯಾಸಕರು ಹಾಗೂ ಇನ್ನಿತರರು ಯಕ್ಷಗಾನ ಪ್ರದರ್ಶನದ ನಿಮಿತ್ತ ವಿಶೇಷವಾದ ಪ್ರೋತ್ಸಾಹವನ್ನು ನೀಡಿದ್ದಾರೆ. ಇವರಿಗೆ ಮನಸಾರೆ ವಂದಿಸುತ್ತೇನೆ. ಹವ್ಯಾಸಿ ಬಳಗ ಕದ್ರಿ (ರಿ) ಮಂಗಳೂರು, ಕರ್ನಾಟಕ ಯಕ್ಷ ಭಾರತಿ ಪುತ್ತೂರು, ಕುಳಾಯಿಯ ಬ್ರಹ್ಮ ಶ್ರೀ ನಾರಾಯಣಗುರು ಯಕ್ಷಗಾನ ಮಂಡಳಿ, ಹಾಗೂ ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಮಂಡಳಿ, ಈ ಸಂಸ್ಥೆಗಳ ಸರ್ವರು ನನ್ನ ಪ್ರಸಂಗಗಳ ಪ್ರದರ್ಶನದ ಯಶಸ್ವಿಗೆ ಹೃದಯ ಪೂರ್ವಕವಾಗಿ ಸ್ಪಂದಿಸಿದ್ದಾರೆ. ಇವರಿಗೆಲ್ಲ ನನ್ನ ನಮನಗಳು.

ಪುಸ್ತಕ ವಿನ್ಯಾಸವನ್ನು ಮಾಡಿದ ಗೆಳೆಯ ಶ್ರೀ ಹರೀಶ್ ಕಿನ್ನಿಗೋಳಿ ಹಾಗೂ ಅಕ್ಷರ ಸಂಯೋಜನೆ ಮಾಡಿದ ಪ್ರಕಾಶ್ ಎಂಟರ್‌ಪ್ರೈಸಸ್, ಕುಳಾಯಿ ಇದರ ಮಾಲೀಕರಾದ ಶ್ರೀ ಪ್ರಕಾಶ ಬಿ.ವಿ. ಹಾಗೂ ಬಿಡುಗಡೆಗೆ ಸಹಕರಿಸಿದ ಶ್ರೀ ಲಿಂಗಪ್ಪ ಸೀತಾದೇವ್ ಇವರಿಗೆ ಆತ್ಮೀಯ ಧನ್ಯವಾದಗಳು.

ಡಾ॥ ದಿನಕರ ಎಸ್. ಪಚ್ಚನಾಡಿ. ಎಂ.ಎ, ಡಿ.ಲಿಟ್
ಉಪನ್ಯಾಸಕರು ಕನ್ನಡ ವಿಭಾಗ,
ಶ್ರೀ ಗೋಕರ್ಣನಾಥೇಶ್ವರ ಕಾಲೇಜು,
ಗಾಂಧಿನಗರ, ಮಂಗಳೂರು.

ಚಾಂದ್ರಮಾನ ಯುಗಾದಿ
ದಿನಾಂಕ: ೧೬-೦೩-೨೦೧೦



Scanned with CamScanner

| ಅನುಕ್ರಮಣಿಕೆ | ಪುಟಸಂಖ್ಯೆ |
|---|---|
| ೧. ರಾಜಾ ದಂಡಕ | ೧ – ೨೨ |
| ೨. ಅಗಸ್ತ್ಯ ಪ್ರತಾಪ | ೨೩ – ೪೧ |
| ೩. ವಿರಾಧ ಮೋಕ್ಷ | ೪೨ – ೫೮ |
| ೪. ವೀರ ತರಣಿಸೇನ | ೫೯ – ೭೯ |
| ೫. ಪಾಂಚ ಜನ್ಯೋತ್ಪತ್ತಿ | ೮೦ – ೧೦೦ |

Scanned with CamScanner

# ಅಗಸ್ತ್ಯ ಪ್ರತಾಪ

## ಪಾತ್ರವರ್ಗ

ದೇವೇಂದ್ರ
ವರುಣ
ಮಾರುತ
ಇಲ್ವಲ
ವಾತಾಪಿ
ಕಾಲಕೇಯ
ದ್ವಾರಪಾಲಕ
ಅಗಸ್ತ್ಯ
ಲೋಪಾಮುದ್ರೆ

ಪ್ರದರ್ಶನಕ್ಕೆ ಬಳಸುವ ಪದ್ಯಗಳನ್ನು (★)ಈ ಚಿಹ್ನೆಯಿಂದ ಗುರುತಿಸಲಾಗಿದೆ.



Scanned with CamScanner

# ಕಥಾ ಸಾರ

ಸ್ವರ್ಗ ಲೋಕದಲ್ಲಿ ದೇವೇಂದ್ರನು ದಿಕ್ಪತಿಗಳೊಡನೆ ಸಭೆಯ ಕರೆದು ದಾನವರ ನಿಗ್ರಹಕ್ಕಾಗಿ ಸಾಮರ್ಥ್ಯ ವಿಶೇಷವನ್ನು ವಿಚಾರಿಸುತ್ತಾನೆ. ದೇವತೆಗಳು ದಾನವರ ನಿಗ್ರಹಕ್ಕಾಗಿ ಸದಾ ಬದ್ಧರಾಗಿದ್ದೇವೆ ಎಂದು ಹೇಳಿ ಇಂದ್ರನನ್ನು ಸಂತೋಷಗೊಳಿಸುತ್ತಾರೆ. ಇತ್ತ ಮಣಿಮತಿ ಪುರದಲ್ಲಿ ಸಿಂಹಿಕೆ ಮತ್ತು ವಿಪ್ರಚಿತ್ತಿಯರ ಮಕ್ಕಳಾದ ವಾತಾಪಿ ಇಲ್ವಲರು, ಕಾಲೆ ಹಾಗೂ ಕಶ್ಯಪರ ಮಕ್ಕಳಾಗಿರುವ ಕನಕ ಪುರದ ಕಾಲಕೇಯರೊಂದಿಗೆ ಸ್ವರ್ಗಲೋಕವನ್ನು ಮುತ್ತುತ್ತಾರೆ. ಸ್ವರ್ಗದ ದ್ವಾರಪಾಲಕನು ವಿಚಾರವನ್ನು ಸುರಪಾಲನಿಗೆ ಹೇಳಿದಾಗ ಕೋಪಗೊಂಡ ಇಂದ್ರನು ಸುರಸೇನೆಯೊಂದಿಗೆ ಯುದ್ಧಮಾಡಿ ಸೋಲುತ್ತಾನೆ. ಸ್ವರ್ಗಲೋಕವನ್ನು ದಾನವರು ವಶಪಡಿಸುತ್ತಾರೆ.

ಮೂರು ಲೋಕಗಳನ್ನು ಗೆದ್ದೆವು ಎನ್ನುವ ಕಾರಣದಿಂದ ವಾತಾಪಿ ಇಲ್ವಲರು ದರ್ಪವನ್ನು ತೋರಿಸಲು ಭೂಲೋಕಕ್ಕೆ ಬರುತ್ತಾರೆ. ಹಿಂದೊಮ್ಮೆ ಸ್ವರ್ಗವನ್ನು ಗೆಲ್ಲುವ ಪುತ್ರನನ್ನು ಬಯಸಿ ಯಾಗಮಾಡಬೇಕೆಂದು ಬ್ರಾಹ್ಮಣರಲ್ಲಿ ಕೇಳಿದಾಗ ಅವರು ತಿರಸ್ಕರಿಸಿದ್ದರು. ಆ ಕಾರಣದಿಂದ ಬ್ರಾಹ್ಮಣರ ನಾಶಕ್ಕೆ ಮುಂದಾಗುತ್ತಾರೆ. ಬ್ರಹ್ಮ ದೇವರ ವರಬಲದಿಂದ ಸತ್ತು ಬದುಕುವ ಯೋಗವು ಅವರಿಗಿತ್ತು. ಹಾಗಾಗಿ ಆ ದನುಜರು ಭೋಜನ ಶಾಲೆಯನ್ನು ನಿರ್ಮಿಸುತ್ತಾರೆ. ಹಿರಿಯವನಾದ ಇಲ್ವಲನು ವಾತಾಪಿಯನ್ನು ಆಡಾಗಿಸಿ ಕೊಂದು ಅಡುಗೆಮಾಡಿ ಬ್ರಾಹ್ಮಣರಲ್ಲಿ ಒಬ್ಬೊಬ್ಬರಿಗೆ ಬಡಿಸಿ, ಉಂಡೊಡನೆ "ವಾತಾಪಿ ಬಾ" ಎಂದು ಕರೆಯುತ್ತಾನೆ. ವಾತಾಪಿಯು ಹೊಟ್ಟೆಯನ್ನು ಸೀಳಿ ಬರುತ್ತಾನೆ. ಹೀಗೆ ಬ್ರಾಹ್ಮಣರು ಸಾಯುತ್ತ ಇರುತ್ತಾರೆ.

ಒಂದು ದಿನ ಅಗಸ್ತ್ಯ ಮಹರ್ಷಿ ಮಡದಿ ಲೋಪಾಮುದ್ರೆಯ ಆಶೆಯಂತೆ ಸಂಪತ್ತನ್ನು ದಾನ ಕೇಳಲು ಇಲ್ವಲನಲ್ಲಿಗೆ ಬರುತ್ತಾನೆ. ಆವಾಗ ಇಲ್ವಲನು ಅಗಸ್ತ್ಯನಿಗೆ ಭೋಜನವಿತ್ತು ವಾತಾಪಿ ಬಾ ಎಂದು ಕರೆಯುತ್ತಾನೆ. ದಿವ್ಯ ಜ್ಞಾನದಿಂದ ನಿಜವನ್ನು ಅರಿತಿದ್ದ ಅಗಸ್ತ್ಯ ವಾತಾಪಿಯನ್ನು ಹೊಟ್ಟೆಯಲ್ಲೇ ಜೀರ್ಣಿಸುತ್ತಾನೆ. ಆ ಮೇಲೆ ಕೋಪದಿಂದ ಕೊಲ್ಲಲೆತ್ನಿಸಿದ ಇಲ್ವಲನನ್ನು ತಪೋಬಲದಿಂದ ಸುಟ್ಟು ಬಿಡುತ್ತಾನೆ. ಅವರ ಸಂಪತ್ತನ್ನು ಪಡೆದು ಪತ್ನಿಗೆ ನೀಡಿ ಸಂತೋಷವನ್ನುಂಟು ಮಾಡುತ್ತಾನೆ. ಈ ವಿಚಾರದಿಂದ ಬಲಗುಂದಿದ ಕಾಲಕೇಯರು ಸಮುದ್ರದೊಳಗೆ ಹೋಗಿ ಅಡಗಿಕೊಳ್ಳುತ್ತ ರಾತ್ರಿಯ ಕಾಲದಲ್ಲಿ ಜನರಿಗೆ ಮತ್ತು ಸುರರಿಗೆ ತೊಂದರೆಯನ್ನು ಕೊಡುತ್ತಾರೆ.

ದೇವೇಂದ್ರನು ಕಾಲಕೇಯರನ್ನು ಕೊಲ್ಲುವುದಕ್ಕಾಗಿ ಅಗಸ್ತ್ಯನ ಬಳಿಗೆ ಹೋಗುತ್ತಾನೆ. ಅಗಸ್ತ್ಯನು ಇಂದ್ರನಿಗೆ ಶಕ್ತಿಯ ಅನುಗ್ರಹಮಾಡಿ ಸಮುದ್ರದ ನೀರನ್ನು ಕುಡಿದು ಕಾಲಕೇಯರನ್ನು ಕಾಣುವಂತೆ ಮಾಡುತ್ತಾನೆ. ಆಮೇಲೆ ಇಂದ್ರನು ಕಾಲಕೇಯರನ್ನು ಕೊಂದು ಸಂತೋಷದಿಂದ ಅಗಸ್ತ್ಯ ಮುನಿಗೆ ಕೃತಜ್ಞತೆಯನ್ನು ಹೇಳಿ ಸ್ವರ್ಗಲೋಕಕ್ಕೆ ಹೋಗುತ್ತಾನೆ.



Scanned with CamScanner

॥ ಮೂಲಷಟ್ಪದಿ ॥
ವಾಣೀ ವೀಣಾ ಪಾಣೀ ।
ಮಾನಸ ಸ್ಥಿರವಾಸಿ ।
ಗಾನ ವಿಲೋಲೆ ಹರಸು ವಾಗ್ದೇವಿ ॥
ಜ್ಞಾನಂ ದೇಹೀ ದಾತೆ ।
ಸಾನುರಾಗದಿ ಯಕ್ಷ ।
ಗಾನ ಸಾಹಿತ್ಯ ಬಿತ್ತರಿಸು ಮಾತೆ ॥ ೧ ॥

ದೇವೇಂದ್ರನ ಒಡ್ಡೋಲಗ
॥ ಭೈರವಿ ಝಂಪೆ ॥
☆ ಒಂದು ದಿನ ದಿವದಿ ದೇ । ವೇಂದ್ರನೋಲಗವಿತ್ತು ॥
ವೃಂದಾರಕರನು ಕರೆ । ದೆಂದ ಮುದಗೊಂಡು ॥ ೧ ॥
ಕೇಳಿರೈ ಸುಮನಸರೆ । ಶ್ರೀಲೋಲ ವಿಧಿ ಹರರು ।
ಈಲೋಕವಿತ್ತು ಸುರ । ಪಾಲ ತಾನಾದೆ ॥೨॥

☆ ಮುಕ್ಕೋಟಿ ದೇವತತಿ । ತಕ್ಕ ಸಂಭ್ರಮದೊಳಿರೆ ।
ಇಕ್ಕೆಲದ ಸಭೆಯಿಂದ । ಉಕ್ಕಿತಾನಂದ ॥ ೩ ॥
ಭರಿತ ಭಾಗ್ಯದಿ ನಾವು । ಮೆರೆವೆವಾದರೆ ಖಳರು ।
ದುರುಳತನ ತೋರಿ, ಬಂ । ದರೆ ಮಾಡಲೇನು ॥ ೪ ॥

॥ ಭೈರವಿ ಅಷ್ಟ ॥
☆ ಸುರಪಾಲ ನೀ ಕೇಳಿಂದು । ನಾಕಕೆ, ದುರು ।
ಳರು ಬರಲವರ ಕೊಂದು ॥
ಪರಿಹರಿಸುತ ಜಯ ಪಡೆವೆನೆನುತ್ತಲೆ ।
ವರುಣನು ನುಡಿದನಾಗ ॥ ೧ ॥

☆ ಮಾರುತ ಪದಕೆರಗಿ । ಖೂಳರ ಕೂಡೆ ।
ಹೋರುತ ಮೇಲೆರಗಿ ॥
ಶೂರತನದಿ ಪ್ರಾಣವನು ಕೊಂಬೆ ದುರಿತವು ।
ಬಾರದು ನಮಗೆಂದನು ॥ ೨ ॥



Scanned with CamScanner

॥ ಮಧುಮಾಧವಿ ಏಕ ॥

★ ಸುಮನಸ ವೃಂದ ನೀವೆಂದ ಮಾತಿಂದ ।
ಅಮಿತಾನಂದವು ತನಗಾಯ್ತು ನಮ್ಮಿಂದ ॥
ಕಮಲಾಕ್ಷ ವಿಧಿ ಹರ ಮುಖ್ಯರ ಭಜಿಸಿ ।
ಅಮಲ ಗುಣದಿ ಮೆರೆಯುವ ಕೀರ್ತಿ ಗಳಿಸಿ ॥ ೧ ॥

॥ ಭಾಮಿನಿ ॥
ಪರಿಪರಿಯ ವಿಭವದಲಿ ಸುರತತಿ ।
ಹರುಷದಿಂದಾ ದಿವದಿ ಮೆರೆಯಲು ।
ಸುರಪ ಚಿಂತೆಯನುಳಿದು ಭೀತಿಯ ತೊರೆಯುತಿರಲಿತ್ತ ॥
★ ಮೆರೆವ ಸಿಂಹಿಕೆ ವಿಪ್ರಚಿತ್ತಿಯ ।
ರೆರಕದಿಂದುದಿಸಿರ್ದು ಮಣಿಮತಿ ।
ಮರದೊಳಾ ವಾತಾಪಿಯಿಲ್ವಲರೆಸೆದರತಿ ಬಲರು ॥ ೧ ॥

**ವಾತಾಪಿ, ಇಲ್ವಲರ ಪ್ರವೇಶ**

॥ ಕಾಂಭೋಜಿ ಝಂಪೆ ॥
ಬ್ರಹ್ಮ ದೇವನ ದಿವ್ಯ ವರದಿಂದ ಜಗದೊಳಗ ।
ದಮ್ಯ ಬಲರಾಗಿ ರಾಜಿಸುತ ॥
ಒಮ್ಮತದಿ ಸತ್ತು ಬದುಕುವ ಸಿದ್ಧಿಯಿಂದಣ್ಣ ।
ತಮ್ಮಂದಿರ್ರೈದೆ ಮೆರೆದಿರಲು ॥ ೧॥

॥ ಸೌರಾಷ್ಟ್ರ ತ್ರಿವುಡೆ ॥
★ ಸೋದರನ ಬಿಗಿದಪ್ಪುತಿಲ್ವಲ ।
ಮೋದದಲಿ ತಾ ನುಡಿದನನುಜಗೆ ॥
ಸಾಧಿಸುವ ಘನ ಕಾರ್ಯ ಪೇಳ್ವೆ ।
ಸಾದರದೊಳು ॥ ೨ ॥

॥ ತುಜಾವಂತು ಝಂಪೆ ॥
★ ಕೇಳಗ್ರಭವ ನಾಕ । ದೇಳಿಗೆಯ ವೈಭವವ ।
ನಾಳ ಬೇಕಾ ಸುರರ । ಪೀಳಿಗೆಯ ನಟ್ಟಿ ॥
ಖೂಳರವರೆಮ್ಮವರ । ಕೋಳು ಗೊಂಡಾಳುವರು ।
ಸೋಲಾಯ್ತು ನಮ್ಮವರ ಪಾಲಿಗೀ ಹಿಂದೆ ॥ ೧ ॥



Scanned with CamScanner

॥ ಮಧುಮಾಧವಿ ಅಷ್ಟ ॥

★ ತಮ್ಮ ಯೋಚಿಸು ಪೊರಡುತ ಸೆಣಸಾಡಿ ।
ಧರ್ಮದಿಂ ಗೆಲ್ಲೆ, ದೂರ್ತರು ಸಂಚು ಹೂಡಿ ॥
ಕಮ್ಮಗೋಲನ ತಂದೆಯನು ಕೂಡಿಕೊಂಡು ।
ಹಮ್ಮಿಂದ ಬಂದಡಾಹುತಿ ನಮ್ಮ ದಂಡು ॥ ೧ ॥

॥ ಸಾಂಗತ್ಯ ॥

★ ಕಾಲೆ ಕಶ್ಯಪರಿಂಗೆ ಬಾಲರಾಗಿರುತಿರ್ಪ ।
ಕಾಲಕೇಯರ ಮಹಾ ಬಲವ ॥
ಕೇಳಿ ಪಡೆದು ಸುರ ಜಾಲವ ಸಮರದಿ ।
ಧೂಳೀ ಪಟವ ಮಾಡಲಹುದು ॥ ೧ ॥

॥ ಮಾರವಿ ಏಕ ॥

★ ಭಳಿರೆ ಭಳಿರೆ ದಿಟ ನುಡಿಯಿದು ಕೇಳಾ ।
ಬಲವೆಮಗಿಂದೊದಗೆ ॥
ಗೆಲವು ಖಚಿತವಾ ನಳಿನಾಕ್ಷನು ಸಹ ।
ನಿಲನೆಮ್ಮೆದುರಿನಲಿ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

ಸಾಕು ಸ್ವರ ವಶವಾಯ್ತು, ಪೊರಟಾ ।
ಆಕೆವಾಳರ ಕಂಡು ವಹಿಲದಿ ॥
ನಾಕವನು ಮುತ್ತುವೆನೆನುತ್ತ ವಿ ।
ವೇಕಿ ಪೊರಟ ॥ ೧ ॥
(ಆಕೆವಾಳ=ಶೂರ)

**ಕಾಲಕೇಯರ ಪ್ರವೇಶ**

॥ ಕಾಂಭೋಜಿ ಝಂಪೆ ॥

★ ಕಾಲೆ ಕಾಶ್ಯಪರಿಂಗೆ ಬಾಲರಾಗಿರುತಿರ್ಪ ।
ಕಾಲಕೇಯರು ಕನಕ ಪುರದಿ ॥
ಆಳುತಿದ್ದರು ದರ್ಪ ತೋಳಬಲ ವರಬಲವು ।
ಮೇಳೈಸುತಖಿಳ ವೈಭವದಿ ॥ ೧ ॥



Scanned with CamScanner

॥ ಭೈರವಿ ಝಂಪೆ ॥

★ ಓಲಗವ ನೆರಹಿ ಮಂ । ತ್ರಾಲೋಚನೆಯೊಳಿರುವ ॥
ಕಾಲದಲಿ ಸಿಂಹಿಕೆಯ । ಬಾಲರೊಳಪೊಗಲು ॥ ೧ ॥
ಇದಿರೆದ್ದು ಬಂದವರ । ಮುದದಿ ಸತ್ಕರಿಸಿ ಕೇ ।
ಳಿದರು ಕುಶಲವ ಬಂದ । ಹದನಗಳ ನಯದಿ ॥ ೨ ॥

॥ ಬೇಗಡೆ ಏಕ ॥

★ ಕಾಲಕೇಯರೆ ಕೇಳಿ ಬಿನ್ನಪವ । ನಮ್ಮವರು ಸಾಧಿಸಿ ।
ದೇಳಿಗೆಗೆ ಮುಳುವಾಗು ತಾ ಮಘವ ॥
ಕಾಳಗದಿ ಸಲೆ । ಸೋಲ ನುಂಡರು ।
ಮೇಲೆ ಲಕ್ಷ್ಮೀ । ಲೋಲನಿಂ ಖಳ ।
ಜಾಲವೆಲ್ಲವ । ಕೋಳುಗೊಂಡ, ನಿ ।
ವಾಳಿಸುವ ಪ್ರತಿ । ಕೂಲರೆನಿಸುತ ॥ ೧ ॥

★ ದೇವರಾಜನು ನಮಗೆ ರಣಕಿದಿರೆ । ನಮ್ಮೊಡನೆ ಕೂಡುತ ।
ನೀವು ನಾವೊಂದಾಗಿ ಸೆಣಸಿದರೆ ॥
ಕಾವರಾರಾ । ದೇವರಾಜನ ।
ಕಾವನಯ್ಯನೆ । ಧಾವಿಸಲು ಗಡ ।
ಸೋವ ಶಕ್ತಿ ಪ್ರ । ಭಾವ ನಮಗಿದೆ ।
ನೀವು ಭಾವಿಸಿ । ಸಾವಧಾನದಿ ॥ ೨ ॥
(ಸೋವ=ಅಟ್ಟುವ)

॥ ಭೈರವಿ ಅಷ್ಟ ॥

★ ಭಳಿರೆ ಮೆಚ್ಚಿದೆ ನುಡಿಗೆ । ಕ್ಷಾತ್ರದ ತೋಳ ।
ಬಲವ ತೋರ್ಪೆವು ಶಕ್ರಗೆ ॥
ಕುಲವೈರಿ ದೇವ ಸಂ । ಕುಲವ ಮರ್ದಿಸುತೆಮ್ಮ ।
ಅಳವಿ ತೋರ್ಪೆವು ನಿಶ್ಚಯ ॥ ೧ ॥

॥ ಭೈರವಿ ಏಕ ॥

ಹಿರಿಯರ ಮರಣದ ಸೇಡು । ಸಂ ।
ಗರದಲಿ ತೀರಿಪೆ ನೋಡು ॥
ಸ್ವರದ ಧುರಕೆ ಸಂಪೂರ್ಣ । ನೆರ ।
ವಿರುವುದು ನಂಬುವುದೆನ್ನ ॥ ೧ ॥



Scanned with CamScanner

ನಾಕಕೆ ದಾಳಿ

॥ ವಾರ್ಧಕ ॥

ಭರದಿ ಧೈರ್ಯವ ನೊರೆದು ಪರಿವಾರದೊಡಗೂಡಿ ।
ಧುರಕಾಗಿ ಪೊರಟು, ದಿವದೆಡೆಗೈದಿ ಬಾಗಿಲಿನ ।
ಚರರ ಕಂಡಾಗ ಸಾದರದಿ ಪೇಳಿದರು ಬರವಂತಿಳುಹು ಸುರಪಗೆನುತ ॥
ಪರಿವೃತಾನಿಮಿಷರೋಲಗದಿ ನಾಕೇಶನೊ ।
ಪ್ಪಿರಲು ಚರನೈದಿ ಚರಣಕೆ ನಮಿಸಿ ದೈನ್ಯದಿಂ ।
ದುರುಳರೈತಂದು ಮುತ್ತಿದ ವಾರ್ತೆಯಂ ಬಿತ್ತರಿಸಿದ ಕಂಪಿಸೆ ಕಾಯವು ॥ ೧ ॥
(ಪರಿವೃತ=ಆವರಿಸಿದ)

॥ ಮುಖಾರಿ ಏಕ ॥

★ ಕೇಳಯ್ಯ ಮಘವ ನಮ್ಮ ನುಡಿಯ । ಅರಿತಿಲ್ಲ ದೈತ್ಯ ।
ಪಾಳೆಯ ಕೂಡಿ ಬಂದ ಪಡೆಯ ॥
ಕಾಳಗಕೆನ್ನುತ । ದಾಳಿಯಿದನು ನೀ ।
ಪೇಳೆಂದರು ಸುರ । ಪಾಲಗೆ ದರ್ಪದಿ ॥ ೧ ॥

ವಾತಾಪಿ ಮೇಣಿಲ್ವಲರೆಂಬವರು । ಆ ಕಾಲಕೇಯ ।
ದೈತ್ಯ ಸಂಕುಲ ಸೇರುತ ಬಂದಿಹರು ॥
ಮಾತೆರಡಿಲ್ಲದೆ । ಘಾತಿಪೆವಾ ಮರು ।
ಹೂತನ ಪೇಳೆಂ । ದೀತೆರ ನುಡಿವರು ॥ ೨ ॥

॥ ಕೇದಾರ ಗೌಳ ಝಂಪೆ ॥

★ ಚರರ ನುಡಿಯನು ಕೇಳುತ । ಸುರನಾಥ ।
ಭರಿತ ಕ್ರೋಧವ ತಾಳುತ ॥
ದುರುಳರನು ತರಿವೆನೆನುತ । ದಿಗಧಿಪರ ।
ಕರೆಸಿದನು ತಾನಳುಕುತ ॥ ೧ ॥

ಕೇಳ್ದಿರೇ ನೀವೆಲ್ಲರು । ನಮ್ಮೊಡನೆ ।
ಕಾಳಗಕೆ ಬಂದಿರುವರು ॥
ಖೂಳರನು ಸದೆವ ಬಗೆಗೆ । ನಿಮ್ಮ ಮನ ।
ದಾಲೋಚನೆಗಳು ಹೇಗೆ ॥ ೨ ॥



Scanned with CamScanner

॥ ಭೈರವಿ ಅಷ್ಟ ॥

★ ಕನಲುತ್ತಾ ಮಾರುತನು । ರಕ್ಕಸರನ್ನು ।
ಹನನಗೈಯುತ ಬಹೆನು ॥
ಅನುಮತಿ ನೀಡೆಂದರುಹಲಾಗ ವರುಣನು ।
ಮನದಿರವನು ಪೇಳಿದ ॥ ೧ ॥

★ ಅಪ್ಪಣೆಯಿತ್ತರೀಗ । ಧೂರ್ತರುನಾಶ ।
ವಪ್ಪಂದ ನೋಡು ಬೇಗ ॥
ಸೊಪ್ಪನಿಕ್ಕುವೆ ದೈತ್ಯ । ರಿರ್ಪರೆಲ್ಲರ ಕೊಚ್ಚಿ ।
ಬಪ್ಪೆ ನಿಶ್ಚಯವೆಂದನು ॥ ೨ ॥

★ ಲೇಸನಾಡಿದಿರೆನ್ನುತಾ । ವಾಸವನಂದು ।
ತಾ ಸಮರಕ್ಕೈದುತ ॥
ಆ ಸಿಂಧು ಭೋರ್ಗರೆವಂದದಿ ದುರುಳರ ।
ಗಾಸಿಗೊಳಿಸಲಾಕ್ಷಣ ॥ ೩ ॥

॥ ತುಜಾವಂತು ಝಂಪೆ ॥

ಸುರಸೇನೆಯಂಬರದಿ ದನುಜ ತಿಂಥಿಣಿಯೊಡನೆ ।
ಧುರವೆಸಗುತಿಹವೇಳೆ ಮಾರುತನೆ ಬಂದು ॥
ದುರುಳನಾ ವಾತಾಪಿಯನು ತಡೆದು ಮೂದಲಿಸು ।
ತೊರೆದನತಿ ಖತಿಯ ತಾಳುತ್ತ ಜವದಿಂದ ॥ ೧ ॥

॥ ಭೈರವಿ ಏಕ ॥

★ ಯಾರೆಲ ನೀನಾರಿಂದು । ಪರಿ ।
ವಾರವ ಕೂಡುತ ಬಂದು ॥
ಹಾರುತಿರುವೆ ಮರುತನಲೀ । ನೀ ।
ಹೋರುವ ಬಲು ಹಂತಿರಲಿ ॥೧॥

★ ಸುರಪುರ ವಶಗೈಯುವಡೆ । ಬಂ ।
ದಿರುವೆನಗ್ರಜನ ಕೂಡೆ ॥
ಅರಿಯೆಯ ನಾ ವಾತಾಪೀ । ಅನು ।
ವರದಲಿ ನೋಡೆ ಪ್ರತಾಪಿ ॥ ೨ ॥



Scanned with CamScanner

॥ ಭೈರವಿ ಏಕ ॥

☆ ಮರುಳೇ ಸುರಲೋಕವನು । ಪತಿ ।
ಕರಿಪಡೆ ಸಾಧ್ಯವದೇನು ॥
ಹರಣವನುಳಿಸುವ ಬಗೆಗೆ । ನೀ ।
ನರಿ ಹಿತ ನಿನ್ನೇಳಿಗೆಗೆ ॥ ೩ ॥

☆ ಬಡಿವಾರದ ಮಾತೇಕೆ । ನೀ ।
ಕೊಡು ಸಮರವನೀಕ್ಷಣಕೆ ॥
ದಡಿಗತನವ ಬದಿಗಿರಿಸು । ಶರ ।
ತೊಡು ಪೌರುಷಗಳ ಮೆರೆಸು ॥ ೪ ॥

ಮಾರುತನ ಸೋಲು

॥ ಭೈರವಿ ಅಷ್ಟ ॥

ಮರುತ ಕೈ ಗುಂದಲಂದು । ಹೂಂಕರಿಸುತ್ತ ।
ವರುಣ ರೋಷದಲಿ ಬಂದು ॥
ಉರಿದು ಮಾರ್ಮಲೆಯುತ್ತ । ಶರವರ್ಷದಲಿ ಮುತ್ತಿ ।
ದುರುಳರನ್ನಿದಿರಾಂತನು ॥ ೧ ॥

☆ ದುರುಳನೆ ನೀ ನಾರೆಲ । ಸ್ವರ್ಗವನೇರಿ ।
ಧುರಕಾಗಿ ಬಂದೆಯಲ್ಲ ॥
ಭರದಿ ಪೆಸರ ಪೇಳು । ವರುಣನೆನ್ನಲಿ ಹೋರೆ ।
ಹರಣದಾಸೆಯ ಬಿಟ್ಟೆಯಾ ॥ ೨ ॥

॥ ಶಂಕರಾಭರಣ ಮಟ್ಟೆ ॥

☆ ಮೆರೆವ ಮಣಿಮತಿಯಲಿ ದೊರೆಯು ಇಲ್ವಲಾಖ್ಯನು ।
ಧುರ ಸಮರ್ಥನೆನಗೆ ಸಮನೆ ನಿಲಿಸು ಬಲುಹನು ॥
ವರುಣ ನಿನ್ನ ಸತ್ವವರಿವೆ ರಣದೊಳತಿ ಬಲ ।
ಧುರದೊಳಾಂತು ಸೋತು ಬೆದರಿ ಧಾವಿಸುವೆಯೆಲಾ ॥ ೧ ॥



Scanned with CamScanner

॥ ಭೈರವಿ ಅಷ್ಟ ॥

★ ದುರುಳತನಗಳೇತಕೆ । ಧುರದಿ ನಿನ್ನ ।
ಹರಣವ ಕಳೆವೆ ಜೋಕೆ ॥
ಅರುಹುವೆ ನೀತಿಯ । ಸರಿಯಲ್ಲ ನಿನಗಿಂದು ।
ತೆರಳು ನಿನ್ನಯ ಮರಕೆ ॥ ೧ ॥

॥ ದೇಶೀ ಘಂಟಾರವ ಅಷ್ಟ ॥

★ ನಿಲ್ಲೈ, ನಿನ್ನೊಳಾ ಚಲವಿರಲಿದ ತಾಳಿ ॥
ಕೊಳ್ಳು ನೋಳ್ಪೆನೆನುತ್ತ ಕೂರ್ಗಣೆ ॥
ಅಳ್ಳೆಗಿಡೆ ನೊಂದೋಡಿದಂ ॥ ೧ ॥

**ವರುಣನ ಸೋಲು**

॥ ಕಾಂಭೋಜೆ ಝಂಪೆ ॥

ವರುಣಮಾರುತರಿಂತು ಸೋತು ಪಿಂದೋಡುತಿರೆ ।
ಸುರಪಾಲ ಕ್ರೋಧದಲಿ ಬಂದು ॥
ಗರಗರನೆ ವಜ್ರಾಯುಧವ ತಿರುಹೆ ಕಾಲ ಕೇ ।
ಯರು ತಡೆದು ಬಳಿಕ ಸುರಪನಲಿ ॥ ೧ ॥

॥ ಶಂಕರಾಭರಣ ಏಕ ॥

★ ಕುಲಿಶ ಪಿಡಿದು ಧುರಕೆ ಬಂದೆ ।
ಭಳಿರೆ ಸುರಪ ಕೇಳು ಗಜವ ॥
ಇಳಿದು ಸುರರ ಲೋಕ ತೊರೆದು ।
ನಿಲದೆ ಪೋಗೆಲಾ ॥ ೧ ॥

★ ಧಿರುರೆ ಖಳನೆ ಮರುಳು ಗೊಳ್ಳ ।
ದಿರೆಲೊ ನಿನ್ನ ಶೌರ್ಯ ಕಾಂಬೆ ॥
ಭರದಿ ಪೇಳು ಯಾರು ನೀನು ।
ಸೊರಹ ಬೇಡೆಲಾ ॥ ೨ ॥



Scanned with CamScanner

☆ ಮೆರೆವ ಕಾಲಕೇಯರೆಂದು ।
ಕರೆವರೆಲ್ಲ ಲೋಕದೊಳಗೆ ॥
ಸುರರ ಲೋಕ ಪಡೆವ ಸತ್ವ ।
ವಿರುವುದೆಮ್ಮಲಿ ॥ ೩ ॥

☆ ದುರುಳ ಕೇಳು ನಿಮ್ಮ ಛಲವ ।
ಧುರದಿ ಮುರಿದು ಬಳಿಕ ಶಿರವ ॥
ತರಿದು ಮೆರೆವ ಕ್ಷಣದೊಳಿದನು ।
ಅರಿತು ಕೊಳ್ಳೆಲಾ ॥ ೪ ॥

ಇಂದ್ರನ ಸೋಲು

॥ ಭಾಮಿನಿ ॥

☆ ಸುರಪ ಸೋಲಲು ಕಾಲಕೇಯರು ।
ಕರೆದು ಇಲ್ವಲರೊಡನೆ ನಾಕದ ।
ಪರಮ ಪಾವನವೆನಿಪ ವಿಷ್ವರವೇರಿ ವೈಭವದಿ ॥
ಮೆರೆಯುತಿರಲಾ ಕಾಲಕೇಯರು ।
ಸುರಪುರದಿ ಬಳಿಕಿತ್ತಲಿಲ್ವಲ ।
ಧರೆಯ ಸೇರುತಲೊಂದು ದಿನ ಸಹಭವನ ಕರೆದೆಂದ ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

☆ ಅನುಜ ಕೇಳ್ಳೆ ಸುರರ ಸೋಲಿಪ ।
ತನುಜನಹ ಯಜ್ಞವನು ನಡೆಸಲು ॥
ವಿನಯದಿಂ ಪ್ರಾರ್ಥಿಸಲು ವಿಪ್ರರು ।
ಮುನಿದರೆಮಗೆ ॥ ೧ ॥

ಮಾನಗಳೆದಿಹರಂದವರ ಸಂ ।
ತಾನದಾಹುತಿಗೊಳುವ ಮೊಸತು ವಿ ॥
ಧಾನ ಪೇಳೆನಲನುಜನೊರೆದನು ।
ಮೋದದಿಂದ ॥ ೨ ॥



Scanned with CamScanner

★ ಕೊಂದು ಮಾಂಸವನಟ್ಟು ನೀಕೊಡೆ ।
ತಿಂದ ವಿಪ್ರರ ಬಸಿರಿನಿಂ, ಬಾ ॥
ಯೆಂದು ಕರೆ, ನಾಂ ಸೀಳುತುರವನು ।
ಬಂದು ನಿಲುವೆ ॥ ೩ ॥
(ಅಟ್ಟು=ಅಡಿಗೆ ಮಾಡು)

ಬಾಡ ತಿಂದರನಟ್ಟು ಭುಂಜಿಸೆ ।
ಮೂಢ ವಿಪ್ರರನಳಿಸಿ ನಮ್ಮಯ ॥
ಸೇಡ ತೀರಿಪ ವ್ರತವೆಮಗೆ ಕೈ ।
ಗೂಡಿಬಹುದು ॥ ೪ ॥
(ಬಾಡ=ಮಾಂಸ)

॥ ಮಧುಮಾಧವಿ ತ್ರಿವುಡೆ ॥
★ ಅನುಜನೆಂದುದ ಕೇಳಿ ದಾನವ ।
ಮನದಿ ಮುದವಂ ತಾಳಿ ತನ್ನರ ॥
ಮನೆಯೊಳಗೆ ಭೋಜನದ ಛತ್ರವ ।
ಕ್ಷಣದಿ ರಚಿಸುತ ಮೆರೆದನು ॥ ೧ ॥

ವಿಪ್ರರ ಆಗಮನ
॥ ಕಾಪಿ ಅಷ್ಟ ॥
★ ಭೂರಿ ಭೋಜನ ವಿಹುದೆಂದು । ಬೇಗ ।
ಪಾರಣೆಗೊಂಬಾತುರದಿ ವಿಪ್ರರಂದು ॥
ಬೋರನೆ ಮಣಿಮತಿಯೆಡೆಗೆ । ಸಾಗಿ ।
ದ್ವಾರದೊಳಗೆ ಪೊಕ್ಕು ಬರಲರಮನೆಗೆ ॥ ೧ ॥

॥ ತುಜಾವಂತು ಝಂಪೆ ॥
ಧೀರಯಿಲ್ವಲ, ವಿಪ್ರಗಡಣವಂ ಕಂಡು ನಗೆ ।
ಬೀರಿ ತಾ ಮನ್ನಿಸುತಲೊಬ್ಬೊಬ್ಬರಿಂಗೆ ॥
ಭೂರಿ ಬಾಡೂಟವನ್ನಿತ್ತು ವಾತಾಪಿಯಂ।
ಬಾರೆನಲು ಸರ್ವರುರವಂ ಬಗಿದು ಬಂದ ॥ ೧ ॥



Scanned with CamScanner

॥ ಭಾಮಿನಿ ॥

ಖಳರ ಕಪಟಕೆ ಸಿಲುಕಿ ಭೂಸುರ ।
ರಳಿಯುತಿರೆ ದಿನದಿನಕೆ ತೋಷವ ।
ತಳೆದು ದರ್ಪದಿ ಬಾಳುತಾ ಖಳರಿರುತಿರಲು ಮುಂದೆ ॥

ಅಗಸ್ತ್ಯ ಲೋಪಾಮುದ್ರೆಯರ ಸಂವಾದ

★ ಇಳೆಯೊಳಗೆ ಪೆಸರಾಂತಗಸ್ತ್ಯರು ।
ಎಲೆಮನೆಯ ರಚಿಸುತ್ತ ಸತಿಯಹ ।
ಚೆಲುವೆ ಲೋಪಾಮುದ್ರೆಯೊಡನಿರುತಿರ್ದ ರೊಗ್ಗಿನಲಿ ॥ ೧ ॥

॥ ಕೇದಾರಗೌಳ ಅಷ್ಟ ॥

★ ಒಂದು ದಿನದಿ ಸತಿ ಲೋಪಾಮುದ್ರೆಯ ಸುಖ ।
ಪೊಂದ ಬೇಕೆಂದಾಶಿಸಿ ॥
ಸುಂದರಾಂಗಿಯ ಕರೆಯಲು ತನ್ನ ಪತಿಪಾದ ।
ದ್ವಂದ್ವಕೆ ಮಣಿದೆಂದಳು ॥ ೧ ॥

॥ ಸುರುಟಿ ಏಕ ॥

★ ಹರಣದೆರೆಯ ಯೆನ್ನ । ಈ ಪರಿ ।
ಕರೆದೆಯೇಕೆ ರಮಣ ॥
ತೆರೆದ ಕಣ್ಣು ಕೈ । ಕರೆವಂತಿದೆ, ನಿ ।
ಮ್ಮಿರವದೇನೊ, ಯನ । ಗರಿಯದು ಪೊಸಪರಿ ॥ ೧ ॥

★ ನಿನ್ನ ಸುಖಕೆ ಬಯಕೆ । ಪ್ರಣಯೋ ।
ತ್ಪನ್ನವಾಯ್ತು ಮನಕೆ ॥
ಉನ್ನತಾಂಕವಿದೊ । ನಿನ್ನ ಪೀಠಮನ ॥
ದನ್ನೆ ಬಾರೆಸಂ । ಪನ್ನೆ ಸ್ವರ್ಣಲತೆ ॥ ೨ ॥
(ಅಂಕ = ತೊಡೆ)



Scanned with CamScanner

★ ಬಡತನದನುರಾಗ । ದಿಂದಲಿ ।
ಒಡಗೂಡುವ ಭೋಗ ॥
ನಿಡಿದಾಗಿರಲೇನ್ । ಹೆಡಿಗೆ ಕದನ್ನವು ।
ನುಡಿ ಮೃಷ್ಟಾನ್ನವೆ । ಮೊಡೆನಾಲಿಗೆಯಿರೆ ॥ ೩ ॥
(ಹೆಡಿಗೆ= ದೊಡ್ಡ ಬುಟ್ಟಿ, ಕದನ್ನ= ಹೀನ ಆಹಾರ)

ರಾಜವೈಭವದಲಿ । ಸಿರಿಯು, ಏ ।
ರಾಜಿಸೆ ಮನವರಳಿ ॥
ಭಾಜನರಹುದು, ಮ । ನೋಜ ಕೇಳಿಯಲಿ ।
ಸಾಜದೋಹದವು । ನೈಜ ಬೆಸಲನರಿ ॥ ೪ ॥
(ದೋಹದ= ಬಯಕೆ ಬೆಸಲು= ಹೆರಿಗೆ)

॥ ಕಂದ ॥

★ ಲೋಪಾಮುದ್ರೆಯ ನೀ ತೆರ ।
ತಾಪಸಿಯೊಡಬಡಿಸಿ ರಾಜವಿಭವದ ಸಿರಿಯಂ ॥
ಭೂಪರೊಳೆಮಗೊಲಿದು ಕೊಡಿಸ ।
ಲಾಪವನಿಲ್ವಲನೆ ಕಾಂಬನೆಂದ್ಯೆತಂದುಂ ॥ ೧ ॥

॥ ವಾರ್ಧಕ ॥
ಮುನಿಪ ನೀ ತೆರದಿಂದ ಯೋಚಿಸುತ ಮನದೊಳಗೆ ।
ಸನುಮತದಿ ಪಯಣದಾ ಮೇಲೆ ಪಯಣದಿ ಬಂದು ।
ಘನತರದ ಸೌಧವನು ಪೊಕ್ಕನತಿ ತೋಷದಲಿ
ಧನವನಾಶಿಸುತ ಜವದಿ ॥
ಅನಕ ವಾತಾಪಿ, ಯಿಲ್ವಲರೊಡನೆ, ಮೌನಿಪಂ ।
ಧನವನಾಶಿಸಿ ಬರುವುದನು ತಿಳಿದು ಮುದದಿಂದ ।
ವಿನಯದಿಂ ತಲೆವಾಗಿ ಪದಕೆರಗುತಡಿಗಡಿಗೆ
ಕೈವಿಡಿದು ಕರೆತಂದರು ॥ ೧ ॥
(ಅನಕ = ಆವಾಗ)



Scanned with CamScanner

॥ ಮಧ್ಯಮಾವತಿ ಏಕ ॥

ಆಮೈತ್ರಾವರುಣನ ಒಲಿಸಿ ಪಾರಣೆಗೊಂಬ ।
ಈ ಮಹಾಯೋಗವು ಬಂದಿತೆಂದೆನುತಾ ॥
ಆ ಮತ್ತರೀರ್ವರು ಬಹುವಿನಯದೊಳೊಯ್ದು ।
ನೇಮದಿಂದುಪಚಾರವೆಸಗುತೊರೆದರು ॥ ೧ ॥

॥ ಸಾಂಗತ್ಯ ॥

★ ಅಪರೂಪವಿದುಸ್ವಾರಿ, ಬಂದಿಲ್ಲಿ ಹಿಂದೆ ಪೋ ।
ದಪುದು ಸರ್ವಥ ಸಾಧ್ಯವಿಲ್ಲ ॥
ಕೃಪೆಯಿಂದ ಬಂದ ಕಾರ್ಯವ ಪೇಳಿ ಅಳಿವ ಮುಂ ।
ದುಪಕಾರವಹುದು ನಿರ್ಣಯದಿ ॥ ೧ ॥

॥ ಮಧುಮಾಧವಿ ಏಕ ॥

★ ಬಲು ಭಾಗ್ಯವಂತರೂ ನೀವು ಮೂಜಗದಿ ।
ಬಲಸಾಧನೆಯೊಳಾರು ಸರಿಗಾಣೆ ನಿಜದಿ ॥
ಬಳಿ ಬಂದೆನೊಲವಿಂದ ದಾನ ಕಾಂಕ್ಷೆಯಲಿ ।
ಒಲಿದು ಸಂಪದವ ನೀವುದು ನೀವಿಂದಿನಲಿ ॥ ೧ ॥

ದಾನವೀವಡೆ ಮನವಿಹುದಯ್ಯಯೆಮಗೆ ।
ಸಾನುರಾಗದಿ, ನಮ್ಮಾತಿಥ್ಯವು ನಿಮಗೆ ॥
ಮಾನಸಕೊಪ್ಪುವಂದದಿ ಮಾಂಸದಡುಗೆ ।
ನಾವಿತ್ತು ಧನ್ಯರಾಗಲು ತೃಪ್ತಿ ಕಡೆಗೆ ॥ ೨ ॥

ಇಂತೆಂದ ನುಡಿಗೆ ತೋಷದಿ ಸ್ನಾನಕೆಳಸಿ ।
ತಾಂ ತೆರಳಿದ ನದಿಯೆಡೆಗಾಗ ತಪಸಿ ॥
ಆಂತು ವಾತಾಪಿಯ ಪಲದಿಂದಿಲ್ವಲನು ।
ಸಂತೋಷದಿಂದೂಟ ಸಿದ್ಧ ಮಾಡಿದನು ॥ ೩ ॥
(ಪಲ= ಮಾಂಸ)



Scanned with CamScanner

॥ ತುಜಾವಂತು ಝಂಪೆ ॥

★ ಮುಂತೆ ಸ್ನಾನಾದಿಗಳ ಪೂರೈಸಿ ಬರೆ ಮುನಿಪ ।
ಸಂತಸದಿ, ಯಿಲ್ವಲನು ಕರೆದು ಕುಳ್ಳಿರಿಸೆ ॥
ಅಂತರಿಸದೆಲ್ಲಮಂ ಬಡಿಸೆ ಮುನಿಯುಂಡಾಗೆ ।
ಅಂತಕನೆಡೆಗೆ ಪೋಪೆಯೆನುತ ಖಳನೆಂದ ॥ ೧ ॥

॥ ಕಾಂಭೋಜ ಅಷ್ಟ ॥

★ ಸಿಕ್ಕಿದೆ ಮೂರ್ಖ ತಾಪಸಿಯೆ । ನಿನ್ನ ।
ಮುಕ್ಕಿತಿಂಬೆವು ಪಾಡನರಿಯೆ ॥
ಸೊಕ್ಕಿದ ಬುಧರು ನೂ । ರಕ್ಕೋರ್ವ ಸಮನೀನು ।
ಠಕ್ಕು ಬುದ್ಧಿಯ ವಿಪ್ರದಕ್ಕಿದೆ ।
ಇಕ್ಕಿರುವ ಗಾಳಕ್ಕೆ ನೀ ಬಲಿ ॥ ೧ ॥

॥ ಭೈರವಿ ಅಷ್ಟ ॥

★ ತಾಳು ತಮ್ಮನನೀಗಲೆ । ಕರೆಯುವೆ ಹೊಟ್ಟೆ ।
ಸೀಳಿ ಬಂದಪನಾಗಲೆ ॥
ಪಾಲು ಮಾಡುತ ನಿನ್ನ । ಹೋಳ ನುಂಬೆವು ನಮ್ಮ ।
ಗಾಳಕ್ಕೆ ಮೀನಾದೆಯ್ಯ ॥ ೧ ॥

॥ ಮಾರವಿ ಏಕ ॥

★ ಅರಿತಿಹೆ ನಿಮ್ಮೀ ಪರಿಯ ಕುಹಕಗಳ ।
ಪರಿಹಾರವ ಮಾಳ್ಪೆ ॥
ಧರೆಯಲಿ ವಿಪ್ರರ ಪರಿಭವಗೊಳಿಸುವ ।
ದುರುಳರೆ ಪರಿಕಿಪುದು ॥ ೧ ॥



Scanned with CamScanner

## ವಾತಾಪಿಯ ಜೀರ್ಣಿಸುವುದು

॥ ಭಾಮಿನಿ ॥

★ ಕೋಪದಿಂದಂಗ್ಯೆ ನೆಗಹಿ, "ವಾ ।
ತಾಪಿ" ಜೀರ್ಣೋರ್ಭವ" ಯೆನುತ ಪೊಡೆ ।
ಗಾಪರಿಯೊಳದ ತಡಹೆ ಹಾಹಾಕಾರರವದಿಂದ ॥
ಪಾಪಿ ಗರ್ಭದಿ ಕರಗೆ ಕಂಡು ಪ್ರ ।
ತಾಪದಿಂದಿಲ್ವಲಗುಡುಗಿ ಮನ ।
ಗಾಪಳಿದು, ಮಾರ್ಮಲೆತು ಖಡ್ಗವ ಸೆಳೆಯುತಿಂತೆಂದ ॥ ೧ ॥

॥ ಶಂಕರಾಭರಣ ಮಟ್ಟೆ ॥

★ ಅನುಜನನ್ನು ಬಲಿಯಕೊಂಡ ಮುನಿಪ ನಿನ್ನಯ ।
ತನುವ ಖಂಡಿಸುವೆನು ನೋಡು ಖಡ್ಗಧಾರೆಯ ॥
ಬರಡು ಮಂತ್ರವಿದನು ತಡೆಯಲಾಗದೆನ್ನುತ ।
ಸರಿದು ಬರಲು ಮೊಗವ ತಿರುಹುತೆಂದಗಜರುತ ॥ ೧ ॥

## ಇಲ್ವಲನ ವಧೆ

॥ ಸೌರಾಷ್ಟ್ರ ತ್ರಿವುಡೆ ॥

★ ದರಗು ರಾಶಿಯು ಬಂದು ತಾಕಿಡಿ ।
ಯುರಿಯ ಮಾರ್ಮಲೆವಂತೆ ನೀನೇ ।
ವರಿಪೆ ಮೃತ್ಯುವನೆನುತವನ ಸು
ಟ್ಟುರುಹಿ ಬಿಟ್ಟ ॥ ೧ ॥

॥ ಭಾಮಿನಿ ॥

ದುರುಳರನು ತರಿವುತ್ತಗಸ್ತ್ಯನು ।
ಮೆರವ ಮಣಿಮತಿ ಪುರದೊಳಿರುತಿಹ ।
ಭರಿತ ದ್ರವ್ಯದ ಪಡೆದು ಸತಿಯಳಿಗಿತ್ತ ತವಕದಲಿ ॥
ಹರಣದಾಸೆಗೆ ಕಾಲಕೇಯರು ।
ಸ್ವರದಿ ಧರೆಗೈತಂದಗಸ್ತ್ಯನ ।
ಪರಿಸರದಿ ಮರೆಯಾಗಿ ಕಡಲೊಳಗಡಗಿ ಕೊಂಡಿರಲು ॥ ೧ ॥

॥ ಸೌರಾಷ್ಟ್ರ ತ್ರಿವುಡೆ ॥

★ ನಿಶಿಯ ಕಾಲದೊಳೆದ್ದು ದುರುಳರು ।
ವಸುಮತಿಯ ಜನರಿಂಗೆ ಸುರರಿಗೆ ।
ಎಸಗುತೀರ್ದರು ಭರಿತ ಕಷ್ಟವ ।
ಒಸಗೆಯಿಂದ ॥ ೨ ॥
(ಒಸಗೆ = ಸಂತೋಷ)



Scanned with CamScanner

॥ ಸಾಂಗತ್ಯ ॥

★ ದುರುಳರೀ ಪರಿಯಿಂದ ಭರಿತಕಷ್ಟವನೀಯೆ ।
ತರಹರಿಸುತಸುರಪಾಲ ॥
ಪರಮ ತಪೋನಿಧಿಯೆನಿಸಿದಗಸ್ತ್ಯರು ।
ಇರುವೆಡೆ ಸಾಗಿ ತಾಬಂದ ॥ ೧ ॥

ಮುನಿಪನಗಸ್ತ್ಯನು ಲೋಪಾಮುದ್ರೆಯ ಕೂಡಿ ।
ಸನುಮತದಿಂದಿರುತಿರಲು ॥
ಘನತಪೋನಿಧಿ ಕಾಯೋ ನೀನೆಂದು ಸುರಪಾಲ ।
ಮಣಿದೆಂದ ಪಾದಾಬ್ಜಗಳಿಗೆ ॥ ೨ ॥

॥ ಸೌರಾಷ್ಟ್ರ ತ್ರಿವುಡೆ ॥

★ ಏನು ಬಂದ್ಯೆ ಸುರಪ ನೀ ತೆರ ।
ಆನನದ ಸಿರಿ ಕಂದಿ ಪೋಗಿರೆ ॥
ದೀನನಾಗಿಹೆ ದುಗುಡ ಪೇಳ್ವೈ ।
ಮಾನನಿಧಿಯೆ ॥ ೧ ॥

॥ ಕಾಫಿ ಅಷ್ಟ ॥

★ ಪೇಳಲೇನ್ಯೆ ಮೌನಿವರ್ಯ । ಎನ್ನ ।
ಗೋಳನಾ ದುಷ್ಟ ರಕ್ಕಸರ ಕೈಂಕರ್ಯ ॥
ಪಾಲಿಸುವರೆ ನೀ ಮುಂದಾಗು । ದೂರ್ತ ।
ಕಾಲಕೇಯರು ಕಾರಣರು ಬಾಧೆ ನೀಗು ॥ ೧ ॥

ದುರುಳ ವಾತಾಪಿಯಿಲ್ವಲರ । ನೀ ಸು ।
ಟ್ಟುರುಹಿ ಕಾಪಾಡಿದೆ ನಮ್ಮ ಬರ್ದಿಲರ ॥
ಶರಧಿಯೊಳಡಗಿರ್ಪ ಖಳರ । ನೀ ಸಂ ।
ಹರಿಸ ಬಲ್ಲವನೊಬ್ಬ ಕಾಣೆ ಕಾವವರ ॥ ೨ ॥

॥ ಭಾಮಿನಿ ॥

★ ಬೆದರದಿರು ಸುರ ಪಾಲಕನೆ, ನಾ ।
ನೊದಗಿಸುವೆ ಪರಿಹಾರಸೂತ್ರವ ।
ವಧೆಯ ಹೊಣೆ, ತನಗಿನ್ನು ಯೋಚಿಸ ಬೇಡ ನೀನೆನುತ ॥
★ ಒದಗಿನಿಂ ಸುರಪತಿಯೊಡನೆ ಬಂ ।
ದು,ದಧಿಯನು ಮಂತ್ರಿಸುತ ಕರತಳ ।
ಮದರೊಳಾಂತನು ಸೆಳೆದು ಪೀರ್ದನು ಜಗವೆ ಬೆರಗಾಗೆ ॥೧॥



Scanned with CamScanner

॥ ಕಂದ ॥
ಶರಧಿಯ ಜಲಚರ ಸಹಿತಂ ।
ಕಿರಿದಾಗಿಸಿ ಕುಡಿಯೆ ಕಾಲಕೇಯರನಿಬರುಂ ॥
ಮರೆಯಿಂದೆದ್ದಾಕ್ರೋಶದಿ ।
ಸುರಪಾಲಕನಿದಿರು ನಿಂದು ಧುರವ ನೆಗಳ್ದರ್ ॥ ೧ ॥

॥ ಶಂಕರಾಭರಣ ಮಟ್ಟೆ ॥
★ ಏನೆಲಾ, ಸುರೇಶ ನೀನು ಗುಪ್ತತನದಲಿ ।
ತಾನೆ ಮುನಿಯ ಕೂಡಿಕೊಂಡು ಬಂದೆ ಜವದಲಿ ॥
ಜಾಣತನವನೆಲ್ಲ ನಿಲಿಪೆನೀಗಲೆನ್ನುತ ।
ದಾನವೇಶ ಖತಿಯೊಳಾಯುಧವನು ತಿರುಹುತ ॥ ೧ ॥

★ ದುರುಳ ತನದಿ ಸುರರ ಭಾಗ್ಯ ಸೂರೆ ಗೊಂಡಿಹೆ ।
ಭರದಿ ನಿನ್ನ ಶಿರವ ಖಂಡಿಸಲ್ಕೆ ಬಂದಿಹೆ ॥
ಧುರವ ಗೈವ ಬಯಕೆವಿದ್ದರೀಗ ನಿಲ್ಲೆಲ ।
ಶರಧಿ ಮಧ್ಯೆ ಸೇರಿ ದಂಥ ಕುಹಕ ತೋರೆಲ ॥ ೨ ॥

**ಕಾಲಕೇಯರ ವಧೆ**

॥ ಭಾಮಿನಿ ॥
★ ದುರುಳ ಸೂರಹುತ್ತಿರಲು ಮೌನೀ ।
ಶ್ವರನ ವರದಿಂದವರನೆಲ್ಲರ ।
ಶಿರವರಿದು ಸುರಪಾಲ ಮುನಿಗೆರಗುತ್ತ ತೆರಳಿದನು ॥
ಮೆರೆಯಲೀ ಕಥೆ ಮನದ ಕಿಲ್ಬಿಷ ।
ಉರಿವ ದೀವಿಗೆಯಾಗಿ ಬೆಳಗಲಿ ।
ಭರಿತ ಸುಖ ಭಾಗ್ಯದಲಿ ನೀತಿಯನುಳಿಸಲೀ ಜಗದಿ ॥೧॥

★★★



Scanned with CamScanner

ಮುನ್ನುಡಿಯ ಸೇಸೆಯಿಂದ...

ಇಲ್ಲಿ ಸಂಕಲನಗೊಂಡಿರುವ 'ರಾಜಾ ದಂಡಕ' 'ಅಗಸ್ತ್ಯ ಪ್ರತಾಪ', 'ವಿರಾಧ ಮೋಕ್ಷ', 'ವೀರ ತರಣಿಸೇನ' ಹಾಗೂ 'ಪಾಂಚಜನ್ಯೋತ್ಪತ್ತಿ' ಎಂಬೀ ಐದು ಪ್ರಸಂಗಗಳೂ ಪುರಾಣ ಪ್ರಪಂಚಕ್ಕೆ ಸಂಬಂಧ ಪಟ್ಟವುಗಳು ಯಕ್ಷಗಾನದಂಥ ಸಮೃದ್ಧವೂ, ಸಮಗ್ರವೂ ಎನಿಸಿದ ರಮ್ಯಾದ್ಭುತ ಜಾಯಮಾನದ ರಂಗಭೂಮಿಗೆ ಸಲ್ಲುವ ಕಥಾನಕಗಳಿಗೆ ಪುರಾಣಗಳು ಅಕ್ಷಯ ಆಕರಗಳಾಗಿವೆ.

ಯುಕ್ತ ಕಥಾಸಾಮಗ್ರಿಗಳನ್ನು ಆಯ್ಕೆ ಮಾಡಿ ಯಕ್ಷಗಾನ ರಂಗಕ್ಕೆ ಒಪ್ಪುವಂತೆ ಕೃತಿರಚನೆ ಮಾಡುವುದು ಯಕ್ಷಗಾನ ಕವಿಯ ಪ್ರತಿಭಾ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಈ ದಿಶೆಯಲ್ಲಿ ಡಾ. ಪಚ್ಚನಾಡಿಯವರ ಸಾಧನೆ ಶ್ಲಾಘ್ಯವೂ ರೋಚಕವೂ ಆಗಿದೆ. ಈ ಯಕ್ಷಗಾನ ಪ್ರಸಂಗಗಳು ಯಕ್ಷಗಾನ ರಂಗ ಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿವೆ ಎನ್ನಲು ಅಡ್ಡಿಯಿಲ್ಲ. ಈ ಕೃತಿಗಳು ಈಗಾಗಲೇ ಯಕ್ಷಗಾನ ರಂಗಸ್ಥಳದಲ್ಲಿ ಯಶಸ್ವಿಯಾಗಿ ಪ್ರಯೋಗಗೊಂಡಿವೆ.

ಯಕ್ಷಗಾನ ಪ್ರಸಂಗರಚನೆ ಸರಳ ಸುಲಭ ಕಾಯಕವಲ್ಲ. ಅಂಥ ಶ್ರಮದಾಯಕವಾದ ಸಾಹಿತ್ಯರಚನೆಯಲ್ಲಿ ಡಾ. ಪಚ್ಚನಾಡಿಯವರು ಸಾಕಷ್ಟು ಪ್ರೌಢಿಮೆಯನ್ನು ಗಳಿಸಿದ್ದಾರೆ. ಸಾಹಿತ್ಯದೃಷ್ಟಿಯಿಂದ ಇವರ ಕೃತಿಗಳಲ್ಲಿನ ಮೌಲಿಕತೆ ಗಮನೀಯವಾಗಿದೆ. ಈ ಸಾಧನೆಗಾಗಿ ಶ್ರೀಯುತರನ್ನು ಮನಸಾರೆ ಅಭಿನಂದಿಸುತ್ತೇನೆ. ಅಂತೆಯೆ, ಡಾ. ದಿನಕರ ಪಚ್ಚನಾಡಿಯವರಿಂದ ಯಕ್ಷಗಾನ ಕ್ಷೇತ್ರದ ಬಹುಮುಖ ಸೇವೆಯು ಇನ್ನಷ್ಟು ಪ್ರಮಾಣದಲ್ಲಿ ಜರಗಲಿ ಎಂದು ಹಾರೈಸುತ್ತೇನೆ.

**ಡಾ। ಅಮೃತ ಸೋಮೇಶ್ವರ**
ನಾಡಿನ ಹಿರಿಯ ಕವಿ, ನಿವೃತ್ತ ಪ್ರಾಚಾರ್ಯರು
ಮತ್ತು ಯಕ್ಷಗಾನ ಪ್ರಸಂಗಕರ್ತರು.

Scanned with CamScanner